ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಒಟ್ಟು 2,57,942 ಕಟ್ಟಡಗಳ ಹಾಗೂ ಖಾಲಿ ನಿವೇಶನಗಳ ಮಾಲೀಕರುಗಳು ಬೆಂಗಳೂರು ಮಹಾನಗರ ಪಾಲಿಕೆಗೆ ಕಂದಾಯವನ್ನು ಪಾವತಿ ಮಾಡುತ್ತಿದ್ದಾರೆ.

ಆ) ಹಾಲಿ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ತಿ ತೆರಿಗೆಯ ಲೆಕ್ಕವನ್ನು ಗಣಕೀಕರಣ ಮಾಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ವಿಷಯ : ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳನ್ನು ಕಡ್ಡಾಯವಾಗಿ ವಿಮೆ ಮಾಡುವ ಬಗ್ಗೆ.

Q : 1628

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಅನ್ವಯ ರಾಜ್ಯದಲ್ಲಿ ನೊಂದಣಿಯಾಗಿರುವ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಒಟ್ಟು ಸಂಖ್ಯೆ ಎಷ್ಟು?

ಆ) ಮತೀಯ ಮತ್ತು ಇತರೆ ಕ್ಷೋಭೆ ತರುವಂತಹ ಸಂದರ್ಭಗಳಲ್ಲಿ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಮೇಲೆ ಉಂಟಾಗುವ ಲೂಟಿ, ದುರುದ್ದೇಶದಿಂದ ಬೆಂಕಿ ಹಚ್ಚುವುದು, ಬೆಂಕಿ ಅಪಘಾತಗಳು ಅವುಗಳಿಂದ ಉಂಟಾಗುವ ನಷ್ಟಗಳ ವಿರುದ್ಧವಾಗಿ ರಾಜ್ಯದ ಎಲ್ಲಾ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳನ್ನು ಕಡ್ಡಾಯವಾಗಿ ವಿಮೆಯನ್ನು ಜಾರಿಗೊಳಿಸುವ ಬಗ್ಗೆ ಯಾವುದಾದರೂ ಪ್ರಸ್ತಾವನೆಯು ಇದೆಯೇ?

ಇ) ಆ ರೀತಿಯ ಪ್ರಸ್ತಾವನೆಯು, ಅಂತಹ ಸಂದರ್ಭಗಳಲ್ಲಿ ಅವರುಗಳಿಗೆ ಕೊಡಬೇಕಾದ ಪರಿಹಾರವು ಸರ್ಕಾರಕ್ಕೆ ಉಳಿತಾಯವಾಗುವುದಿಲ್ಲವೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ದಿನಾಂಕ 31-3-1991ರ ಅಂತ್ಯಕ್ಕೆ 1,62,548.

ಆ) ಇಲ್ಲ.

ಇ) ಉಪಪ್ರಶ್ನೆ (ಆ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಸಣ್ಣ ಕೈಗಾರಿಕಾ ಇಲಾಖೆಯಿಂದ ರಾಜ್ಯದಲ್ಲಿ ನಿರ್ಮಿಸಲ್ಪಟ್ಟಿರುವ ಕೈಗಾರಿಕಾ ಶೆಡ್‌ಗಳ ಬಗ್ಗೆ.

Q : 47

ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಈವರೆಗೆ ಸಣ್ಣ ಕೈಗಾರಿಕೆ ಇಲಾಖೆಯಿಂದ ನಿರ್ಮಿಸಲ್ಪಟ್ಟಿರುವ ವಿವಿಧ ಹಂತದ ಕೈಗಾರಿಕಾ ಶೆಡ್ಡುಗಳು ಎಷ್ಟು?

ಆ) ಪ್ರಸಕ್ತ ಕೈಗಾರಿಕಾ ಅಭಿವೃದ್ಧಿ ನಿಗಮ ಕಟ್ಟಿಸುತ್ತಿರುವ ಷೆಡ್ಡುಗಳ ಸಂಖ್ಯೆ ಎಷ್ಟು?

ಇ) ಶೆಡ್ಡುಗಳನ್ನು ಯಾವ ಯಾವ ಸ್ಥಳಗಳಲ್ಲಿ ಕಟ್ಟಿಸಲಾಗುವುದು?

ಶ್ರೀ ಸಿ. ಆರ್. ಸಗೀರ್ ಅಹಮ್ಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು) :

ಅ) 4400 ಶೆಡ್ಡುಗಳು.

'ಎ' ಮಾದರಿ	367
'ಬಿ' ಮಾದರಿ	1004
'ಸಿ' ಮಾದರಿ	1527
'ಡಿ' ಮಾದರಿ	956
'ಎಂ' ಮಾದರಿ	302
'ಸೂಪರ್ ಮಿನಿ' ಮಾದರಿ	142
'ಸ್ಪೆಷಲ್ ಬಿ' ಮಾದರಿ	52
'ಎಂಎಫ್' ಮಾದರಿ	12
'ಇ' ಮಾದರಿ	16
'ಎಫ್' ಮಾದರಿ	16
'ಜಿ' ಮಾದರಿ	6
ಒಟ್ಟು	4400

ಆ) 214 ಶೆಡ್ಡುಗಳು.

ಇ) ಪಟ್ಟಿ ಲಗತ್ತಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 47ರ ಅನುಬಂಧ

	ಮಳಿಗೆಗಳ ಮಾದರಿ					
ಕ್ರಮ ಸಂಖ್ಯೆ ಸ್ಥಳ	ಎ	ಬಿ	ಸಿ	ಡಿ	ಎಸ್ಎಮ್	ಒಟ್ಟು
1.ಹೊಸಕೋಟೆ	-	-	4	-	4	8
2.ಪೀಣ್ಯ 1ನೇ ಹಂತ	9	-	3	-	-	12